## ಕೂದಲು ಉದುರುವಿಕೆ

## ತಡೆಗೆ ಹಿಮಾಲಯ ಕ್ರೀಮ್




ಕೂದಲು ಉದುರುವಿಕೆ ತಡೆಗಟ್ಟುವ ಹೇರ್ ಫಾಲ್ ಕ್ರೀಂ ಅನ್ನು ಹಿಮಾಲಯ ಕಂಪೆನಿ ಮಾರುಕಟ್ಟೆಗೆ ತಂದಿದೆ. ಇದು ತಲೆಗೂದಲು ಉದುರುವಿಕೆಯನ್ನು ಬುಡದಿಂದ ನಿರ್ನಾಮ ಮಾಡುವ ಶಕ್ತಿ ಹೊಂದಿದ್ದು ಅದು ಅತ್ಯಂತ ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡಲಿದೆ ಎನ್ನುತ್ತದೆ ಕಂಪೆನಿ.

ಗಿಡಮೂಲಿಕೆಗಳಾದ ತಿಸಲ್ಸ್, ಇಂಡಿಯನ್ ಗೂಸ್‌ಬೆರ್ರಿ, ಚಿಕ್ಪಿ ಮತ್ತು ಲಿಕೊರೈಸ್ ಮುಂತಾದವುಗಳಿಂದ ಸಮೃದ್ಧಿಯಾಗಿ ತಯಾರಾದ ಇದು ಕೂದಲು ಉದುರುವಿಕೆ ತಡೆಗಟ್ಟಲಿದ್ದು, ಪ್ರತಿದಿನ ಬಳಸಬೇಕು. ಬೆಲೆ 175 ಮಿಲಿ ಗ್ರಾಂ.ಗೆ 100 ರೂಪಾಯಿ. ಎಲ್ಲ ಪ್ರಮುಖ ಮಳಿಗೆಗಳಲ್ಲಿ ಸಿಗುತ್ತದೆ.



## ಸ್ಯಾಮ್‌ಸಂಗ್ ಸ್ಮಾರ್ಟ್ ರೆಫ್ರಿಜರೇಟರ್

ಸ್ಯಾಮ್‌ಸಂಗ್ ಕಂಪೆನಿ ಇದೀಗ ಪರಿಸರಸ್ನೇಹಿ ಮತ್ತು ಸ್ಟೈಲಿಷ್ ವಿನ್ಯಾಸಗಳಿಂದ ಕೂಡಿದ ಹೊಸ ರೆಫ್ರಿಜರೇಟರ್ ಅನ್ನು ಮಾರುಕಟ್ಟೆಗೆ ತಂದಿದೆ. ಇದರಲ್ಲಿ ಅತ್ಯಾಧುನಿಕ ಡಿಜಿಟಲ್ ಇನ್‌ವರ್ಟರ್ ಅನ್ನು ಅಳವಡಿಸಲಾಗಿದೆ. ಜತೆಗೆ ವಿದ್ಯುತ್ ಬಳಕೆಯಲ್ಲಿ ಮಿತವ್ಯಯ ಸಾಧಿಸಬಹುದು. ಅಲ್ಲದೆ ವಿದ್ಯುತ್ ಇಲ್ಲದಿದ್ದಾಗಲೂ ಉಷ್ಣತೆ ಹೆಚ್ಚಳ ಆಗುವುದನ್ನು ನಿಧಾನಗೊಳಿಸಲು 'ಕೂಲ್‌ಪ್ಯಾಕ್'ನಂತಹ ವಿಶೇಷವನ್ನು ಇದು ಹೊಂದಿದೆ. ನಿರಂತರ 9 ಗಂಟೆ ವಿದ್ಯುತ್ ಇಲ್ಲದಿದ್ದರೂ ಅದರೊಳಗಿನ ಆಹಾರ ಪದಾರ್ಥಗಳು ಕೆಡುವುದಿಲ್ಲ.

ಅಗತ್ಯಕ್ಕೆ ತಕ್ಕಂತೆ ತೇವಾಂಶ ನಿಯಂತ್ರಿಸುವ ಮಾಯಿಸ್ಟ್‌ಫ್ರೆಶ್ ಝೋನ್, ಸುಲಭವಾಗಿ ಎಟುಕಬಲ್ಲ ವಾಟರ್ ಡಿಸ್ಪೆನ್ಸರ್, ಐಸ್‌ಗಾಗಿ ಹೆಚ್ಚಿನ ಸ್ಥಳಾವಕಾಶ ಒದಗಿಸುವ ಐಸ್‌ಮ್ಯಾಕ್ಸ್, ಈ ಫ್ರಿಡ್ಜ್ ಒಳಗೆ ವಾಸನೆ ಬರದಂತೆ ತಡೆಯುವ ಡಿಯೊಡ್ರೈಜಿಂಗ್ ಫಿಲ್ಟರ್, ಪ್ರಕಾಶಮಾನವಾದ ಎಲ್‌ಇಡಿ ಲೈಟಿಂಗ್, ಸುಲಭವಾಗಿ ತೆರೆಯಲು ಅನುಕೂಲವಾಗುವಂತೆ ರೂಪಿಸಿರುವ ರಿಸೆಸ್ಡ್ ಹ್ಯಾಂಡಲ್ಸ್ ಇವೆಲ್ಲವೂ ಈ ಹೊಸ ರೆಫ್ರಿಜರೇಟರ್‌ನ ವೈಶಿಷ್ಟ್ಯ.

ಎರಡು ಶೆಲ್ಫ್ ಗಳಿದ್ದು ಸುಮಾರು 40 ಕೇಜಿವರೆಗೆ ಹಣ್ಣು ತರಕಾರಿಗಳನ್ನು ಸಂಗ್ರಹಿಸಿ ಇಡಬಹುದು.

ಆಕರ್ಷಕ ಬಣ್ಣಗಳಲ್ಲಿ 255ರಿಂದ 555 ಲೀಟರ್ ಸಾಮರ್ಥ್ಯದ ಇದು ವಿವಿಧ ಮಾದರಿಗಳಲ್ಲಿ ಸಿಗುತ್ತದೆ. ಬೆಲೆ 70 ಸಾವಿರ ರೂಪಾಯಿಗಳಿಂದ 2 ಲಕ್ಷದ 9 ಸಾವಿರ ರೂಪಾಯಿಗಳು.

ಮಾಹಿತಿಗೆ: 9945511831




## ಫಿಯಾಮ ದಿ ವಿಲ್ಸ್ ಸೋಪ್

ಐಟಿಸಿ ಯ ಲೀಡಿಂಗ್ ಬ್ರ್ಯಾಂಡ್‌ಗಳಲ್ಲಿ ಒಂದಾದ ಫಿಯಾಮ ದಿ ವಿಲ್ಸ್ ಇದೀಗ ಹೊಸ ಮಾದರಿಯ ಸ್ನಾನದ ಸಾಬೂನುಗಳನ್ನು ಬಿಡುಗಡೆ ಮಾಡಿದೆ. ವಿವಿಧ ಪರಿಮಳದ ಈ ಸಾಬೂನುಗಳು ಕೆಂಪು, ನೀಲಿ ಮತ್ತು ಹಸುರು ಬಣ್ಣಗಳಲ್ಲಿ ಲಭ್ಯ. ಓಟ್ಸ್, ನಟ್ ಗ್ರಾಸ್ ಮತ್ತು ವಾಟರ್ ಲಿಲ್ಲಿ ಗಳಿಂದ ಸಮೃದ್ಧವಾಗಿದ್ದು, ಆರೋಗ್ಯಕ್ಕೆ ಪೂರಕವಾಗಿದೆ. ಇದರಲ್ಲಿರುವ ಜೆಲ್ ಬಾತಿಂಗ್ ಬಾರ್ ಮತ್ತು ಕಂಡಿಷನರ್ ದೇಹದ ಮೇಲೆ ಪರಿಣಾಮಕಾರಿಯಾಗಿ ಕೆಲಸ ಮಾಡುವುದರಿಂದ ಸ್ನಾನಕ್ಕೆ ಅತ್ಯಂತ ಸೂಕ್ತವಾಗಿದೆ ಎನ್ನುವುದು ಕಂಪೆನಿ ವಿವರಣೆ.

ಬೆಲೆ, ಲಭ್ಯತೆ ಮತ್ತಿತರ ವಿವರಗಳಿಗೆ 9818886114

## ಪುರುಷರಿಗಾಗಿ ನಿವಿಯ ಡಿಯೊಡರೆಂಟ್




ಸೌಂದರ್ಯ ಪ್ರಸಾದನ ಕಂಪೆನಿ ನಿವಿಯ ಇದೀಗ ಪುರುಷರಿಗಾಗಿ ಎರಡು ಹೊಸ ಬಗೆಯ ಡಿಯೊಡರೆಂಟ್ ಮತ್ತು ಬಾಡಿ ಸ್ಪ್ರೇ ಗಳನ್ನು ಬಿಡುಗಡೆ ಮಾಡಿದೆ. ಫ್ರೆಶ್ ಪವರ್ ಚಾರ್ಜ್ ಮತ್ತು ಫ್ರೆಶ್ ಪವರ್ ಬೂಸ್ಟ್ ಹೆಸರಿನಲ್ಲಿರುವ ಈ ಉತ್ಪನ್ನಗಳು ಪುರುಷರ ದೇಹವನ್ನು ಇಡೀ ದಿನ ತಾಜಾ ಮತ್ತು ಉಲ್ಲಾಸದಿಂದ ಇರುವಂತೆ ಮಾಡುತ್ತದೆ ಎನ್ನುವುದು ಕಂಪೆನಿ ವಿವರಣೆ.

ಬೆಲೆ 190 ರೂಪಾಯಿ. ಎಲ್ಲ ಪ್ರಮುಖ ಮಳಿಗೆಗಳಲ್ಲಿ ಸಿಗುತ್ತದೆ. ವಿವರಕ್ಕೆ: 9773699592